| ವಿಶ್ವಕಪ್‌ಗಳಲ್ಲಿ ತೆಂಡೂಲ್ಕರ್ ಆಟ | | |
|---|---|---|
| ವಿಶ್ವಕಪ್ | ಪಂದ್ಯ | ರನ್ |
| 1992 | 8 | 283 |
| 1996 | 7 | 523 |
| 1999 | 7 | 253 |
| 2003 | 11 | 673 |
| 2007 | 3 | 64 |
| 2011 | 9 | 482 |



ಸಚಿನ್ ತೆಂಡೂಲ್ಕರ್

# ವಿಶ್ವಕಪ್‌ನಲ್ಲಿ ತೆಂಡೂಲ್ಕರ್ ಅಬ್ಬರ

ತೆಂಡೂಲ್ಕರ್ 1992, 1996, 1999, 2003, 2007 ಹಾಗೂ 2011ರ ವಿಶ್ವಕಪ್‌ಗಳಲ್ಲಿ ಆಡಿದ್ದಾರೆ. ವಿಶ್ವಕಪ್‌ಗಳಲ್ಲಿ ಅವರು ತಮ್ಮ ಹೆಜ್ಜೆ ಗುರುತು ಮೂಡಿಸಿದ್ದಾರೆ.

ಅಂದಹಾಗೆ, ವಿಶ್ವಕಪ್‌ಗಳಲ್ಲಿ ಅತಿ ಹೆಚ್ಚು ರನ್ (2,278) ಗಳಿಸಿರುವ ಆಟಗಾರ ಕೂಡ. 2003ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದ ವಿಶ್ವಕಪ್‌ನಲ್ಲಿ 673 ರನ್ ಗಳಿಸಿದ್ದರು. ಇದು ಕೂಡ ವಿಶ್ವದಾಖಲೆಯಾಗಿ ಉಳಿದುಕೊಂಡಿದೆ. ಆ ಟೂರ್ನಿಯಲ್ಲಿ ಅವರಿಗೆ ಸರಣಿ ಶ್ರೇಷ್ಠ ಗೌರವ ಲಭಿಸಿತ್ತು. ಅದೊಂದು ಅದ್ಭುತ ಆಟ. ಪಾಕಿಸ್ತಾನ ಎದುರು ಗಳಿಸಿದ 98 ರನ್‌ಗಳ ಆಟ ಚಿರಸ್ಮರಣೀಯ. ವಿಶ್ವಕಪ್‌ಗಳಲ್ಲಿ 6 ಶತಕ, 15 ಅರ್ಧ ಶತಕ ಗಳಿಸಿದ್ದಾರೆ.

ಸಚಿನ್ ಆಡಿದ 2003ರ ವಿಶ್ವಕಪ್‌ನಲ್ಲಿ ಭಾರತ ಫೈನಲ್ ತಲುಪಿದ್ದರೆ, ಭಾರತದಲ್ಲಿ 2011ರಲ್ಲಿ ನಡೆದ ಟೂರ್ನಿಯಲ್ಲಿ ಚಾಂಪಿಯನ್ ಆಯಿತು. 2007ರ ವಿಶ್ವಕಪ್‌ನಲ್ಲಿ ಮಾತ್ರ ಅವರು ವಿಫಲರಾಗಿದ್ದರು. ವೆಸ್ಟ್ ಇಂಡೀಸ್‌ನಲ್ಲಿ ನಡೆದ ಆ ವಿಶ್ವಕಪ್‌ನಲ್ಲಿ ಭಾರತ ಮೊದಲ ಸುತ್ತಿನಲ್ಲೇ ಹೊರಬಿದ್ದಿತ್ತು.



## ನಾಯಕತ್ವ ಶೈಲಿ ಬದಲಾಯಿಸಿದ ದಾದಾ

1983ರ ಬಳಿಕ ವಿಶ್ವಕಪ್ ಫೈನಲ್ ಪ್ರವೇಶಿಸಲು ಭಾರತ ತಂಡದವರು ಬರೋಬ್ಬರಿ 20 ವರ್ಷ ಕಾಯಬೇಕಾಯಿತು. 2003ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದ ವಿಶ್ವಕಪ್‌ನಲ್ಲಿ ಭಾರತ ತಂಡ ಫೈನಲ್ ತಲುಪಿತ್ತು. ಆಗ ತಂಡವನ್ನು ಮುನ್ನಡೆಸಿದ್ದು 'ಬಂಗಾಲಿ ಟೈಗರ್' ಸೌರವ್ ಗಂಗೂಲಿ.

ಭಾರತ ತಂಡದಲ್ಲಿ ಆಕ್ರಮಣಕಾರಿ ಮನೋವೃತ್ತಿಯನ್ನು ಮೊದಲು ತಂದಿದ್ದೇ ದಾದಾ. ಲಾರ್ಡ್ಸ್ ಕ್ರೀಡಾಂಗಣದಲ್ಲಿ ನಡೆದ ನಾಟ್‌ವೆಸ್ಟ್ ಸರಣಿಯ ಫೈನಲ್‌ನಲ್ಲಿ ಭಾರತ ಗೆದ್ದಾಗ ಇದೇ ಸೌರವ್ ತಮ್ಮ ಷರ್ಟ್ ಬಿಚ್ಚಿ ಸಂಭ್ರಮಿಸಿ ಇಂಗ್ಲೆಂಡ್‌ಗೆ ಅವರದ್ದೇ ನೆಲದಲ್ಲಿ ಟಾಂಗ್ ನೀಡಿದ್ದರು. ವಿದೇಶಿ ನೆಲದಲ್ಲೂ ಸರಣಿ ಗೆಲ್ಲಬಹುದು ಎಂದು ತೋರಿಸಿಕೊಟ್ಟರು. ಅಷ್ಟೇ ಅಲ್ಲ; ವೀರೇಂದ್ರ ಸೆಹ್ವಾಗ್, ಸುರೇಶ್ ರೈನಾ, ಯುವರಾಜ್ ಸಿಂಗ್ ಅವರಂಥ ಆಟಗಾರರಲ್ಲಿ ಧೈರ್ಯ ತುಂಬಿ ಬೆಳೆಸಿದರು. ಈಗಿನ ನಾಯಕ ವಿರಾಟ್ ಕೊಹ್ಲಿ ಅವರಲ್ಲೂ ಅದೇ ಆಕ್ರಮಣಕಾರಿ ಮನೋವೃತ್ತಿಯನ್ನು ಕಾಣಬಹುದು.

ಸಮರ್ಥವಾಗಿ ಎದುರಿಸಿದ್ದು ಈಗಲೂ ಇತಿಹಾಸ ಪುಟದಲ್ಲಿ ಸ್ಮರಣೀಯವಾಗಿ ಉಳಿದಿದೆ.

1983ರ ವಿಶ್ವಕಪ್‌ನಲ್ಲೂ ಭಾರತ 'ಡಾರ್ಕ್ ಹಾರ್ಸ್' ಆಗಿಯೇ ಉಳಿದಿತ್ತು. ಕಪಿಲ್ ದೇವ್ ಬಳಗದ ಮೇಲೆ ಯಾರಿಗೂ ವಿಶ್ವಾಸ ಇರಲಿಲ್ಲ. ಆದರೆ, ಜಿಂಬಾಬ್ವೆ ವಿರುದ್ಧ ಕಪಿಲ್ 175 ರನ್ ಗಳಿಸಿದ್ದು ವಿಶ್ವ ಕ್ರಿಕೆಟ್‌ನ ಕಣ್ಣು ಕುಕ್ಕುವಂತೆ ಮಾಡಿತು. ಕೇವಲ 17 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿದ್ದ ತಂಡವನ್ನು ಅವರ ಏಕಾಂಗಿ ಹೋರಾಟ ಮೇಲೆತ್ತಿತ್ತು. ಕೊನೆಗೆ ಕಪಿಲ್ ಬಳಗ ಟ್ರೋಫಿ ಗೆದ್ದೇಬಿಟ್ಟಿತು. ಭಾರತ ಕ್ರಿಕೆಟ್‌ನಲ್ಲಿ ಸುವರ್ಣ ಯುಗ ಆರಂಭವಾಯಿತು. ಭಾರತವೂ ಗೆಲ್ಲಬಲ್ಲದು ಎಂಬ ವಿಶ್ವಾಸ ಮೂಡಿಸಿತು. ಅದಕ್ಕೆ ಕಾರಣವಾಗಿದ್ದು ಕಪಿಲ್ ನಾಯಕತ್ವ, ಆಕ್ರಮಣಕಾರಿ ಮನೋವೃತ್ತಿ ಹಾಗೂ ಆಲ್‌ರೌಂಡರ್‌ಗಳ ಪ್ರದರ್ಶನ. ಏಕೆಂದರೆ ಎರಡು ಬಾರಿಯ ಚಾಂಪಿಯನ್ ವೆಸ್ಟ್ ಇಂಡೀಸ್ ತಂಡವನ್ನು ಸೋಲಿಸುವುದು ಎಂದರೆ ಹುಡುಗಾಟದ ವಿಷಯ ಆಗಿರಲಿಲ್ಲ.

ಇಷ್ಟಾಗಿಯೂ ಏಷ್ಯಾ ಖಂಡದಾಚೆ ಭಾರತ ದುರ್ಬಲ ತಂಡವಾಗಿಯೇ ಉಳಿದಿತ್ತು. ಪಾರಮ್ಯ ಸಾಧಿಸಲು ಸಾಧ್ಯವಾಗಿರಲೇ ಇಲ್ಲ. ಏಕದಿನ ಕ್ರಿಕೆಟ್‌ನಲ್ಲಿ ವಿಶ್ವಾಸಾರ್ಹ ಬ್ಯಾಟ್ಸ್‌ಮನ್ ಎನಿಸಿಕೊಂಡವರು ಇರಲಿಲ್ಲ.

1987ರಲ್ಲಿ ಮೊದಲ ಬಾರಿ ಭಾರತದಲ್ಲೇ ವಿಶ್ವಕಪ್ ನಡೆಯಿತು. ಭಾರತ ತಂಡದವರು ಸೆಮಿಫೈನಲ್‌ನಲ್ಲಿ ಪರಾಭವಗೊಂಡರು. 1992ರ ವಿಶ್ವಕಪ್‌ನಲ್ಲೂ ಭಾರತ ಗೆಲ್ಲಲಿಲ್ಲ. ಆದರೆ, ತೆಂಡೂಲ್ಕರ್ ಎಂಬ ಅನರ್ಘ್ಯ ರತ್ನವೊಂದನ್ನು ವಿಶ್ವಕ್ರಿಕೆಟ್‌ಗೆ ನೀಡಿತು.

### ವಾಮನಮೂರ್ತಿಯ ಮೇಲೆ ಅತಿಭಾರ

1996ರಲ್ಲಿ ಸ್ವದೇಶದಲ್ಲೇ ನಡೆದ ವಿಶ್ವಕಪ್ ಇವತ್ತಿಗೂ ಭಾರತದ ಕ್ರಿಕೆಟ್ ಪ್ರೇಮಿಗಳನ್ನು ಕಾಡುತ್ತಿದೆ. ಅಷ್ಟರಲ್ಲಾಗಲೇ ಭಾರತದ ಕ್ರಿಕೆಟ್ ತನ್ನ ಸಂಪೂರ್ಣ ಹೊರೆಯನ್ನು ತೆಂಡೂಲ್ಕರ್ ಮೇಲೆ ಹಾಕಿಬಿಟ್ಟಿತ್ತು. ಕೋಲ್ಕತ್ತದಲ್ಲಿ ಶ್ರೀಲಂಕಾ ವಿರುದ್ಧ ನಡೆದ ಸೆಮಿಫೈನಲ್ ಪಂದ್ಯವೇ ಅದಕ್ಕೊಂದು ಉದಾಹರಣೆ.

ದ್ರಾವಿಡ್, ಗಂಗೂಲಿ ಪ್ರವೇಶದೊಂದಿಗೆ ತೆಂಡೂಲ್ಕರ್ ಮೇಲಿನ ಒತ್ತಡ ತುಸು ತಗ್ಗಿತು. ಜೊತೆಗೆ ಆಕ್ರಮಣಕಾರಿ ಮನೋವೃತ್ತಿಯ ಆಟಗಾರರ ಪ್ರವೇಶದೊಂದಿಗೆ ಹೊಸ ಕಾಲಘಟ್ಟ ಆರಂಭವಾಯಿತು. 2007ರ ವಿಶ್ವಕಪ್‌ನಲ್ಲಿ ಭಾರತ ತಂಡದವರು ಮುಗ್ಗರಿಸಿದರೂ ಬಲಿಷ್ಠ ಮಹಲ್ ಕಟ್ಟಲು ಅಡಿಗಲ್ಲು ಹಾಕುವ ಪ್ರಕ್ರಿಯೆ ಪ್ರಾರಂಭವಾಗಿತ್ತು.

ಇದರ ಪರಿಣಾಮ 2011ರ ವಿಶ್ವಕಪ್‌ನಲ್ಲಿ

| ವಿಶ್ವಕಪ್ ವಿಜೇತರು | | | |
|---|---|---|---|
| ವರ್ಷ | ವಿಜೇತರು | ರನ್ನರ್ ಅಪ್ | ಸ್ಥಳ |
| 1975 | ವೆಸ್ಟ್ ಇಂಡೀಸ್ | ಆಸ್ಟ್ರೇಲಿಯಾ | ಲಂಡನ್ (ಇಂಗ್ಲೆಂಡ್) |
| 1979 | ವೆಸ್ಟ್ ಇಂಡೀಸ್ | ಇಂಗ್ಲೆಂಡ್ | ಲಂಡನ್ (ಇಂಗ್ಲೆಂಡ್) |
| 1983 | ಭಾರತ | ವೆಸ್ಟ್ ಇಂಡೀಸ್ | ಲಂಡನ್ (ಇಂಗ್ಲೆಂಡ್) |
| 1987 | ಆಸ್ಟ್ರೇಲಿಯಾ | ಇಂಗ್ಲೆಂಡ್ | ಕೋಲ್ಕತ್ತ (ಭಾರತ) |
| 1992 | ಪಾಕಿಸ್ತಾನ | ಇಂಗ್ಲೆಂಡ್ | ಮೆಲ್ಬರ್ನ್ (ಆಸ್ಟ್ರೇಲಿಯಾ) |
| 1996 | ಶ್ರೀಲಂಕಾ | ಆಸ್ಟ್ರೇಲಿಯಾ | ಲಾಹೋರ್ (ಪಾಕಿಸ್ತಾನ) |
| 1999 | ಆಸ್ಟ್ರೇಲಿಯಾ | ಪಾಕಿಸ್ತಾನ | ಲಂಡನ್ (ಇಂಗ್ಲೆಂಡ್) |
| 2003 | ಆಸ್ಟ್ರೇಲಿಯಾ | ಭಾರತ | ಜೋಹಾನ್ಸ್‌ಬರ್ಗ್ (ದ.ಆಫ್ರಿಕಾ) |
| 2007 | ಆಸ್ಟ್ರೇಲಿಯಾ | ಶ್ರೀಲಂಕಾ | ಬ್ರಿಜ್‌ಟೌನ್ (ವೆಸ್ಟ್ ಇಂಡಿಸ್) |
| 2011 | ಭಾರತ | ಶ್ರೀಲಂಕಾ | ಮುಂಬೈ (ಭಾರತ) |
| 2015 | ಆಸ್ಟ್ರೇಲಿಯಾ | ನ್ಯೂಜಿಲೆಂಡ್ | ಮೆಲ್ಬರ್ನ್ (ಆಸ್ಟ್ರೇಲಿಯಾ) |